ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 26-31
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕರ್ನಾಟಕದ ವಚನ ಗುಮ್ಮಟ ಮತ್ತು ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ

**ಡಾ. ಬಸವರಾಜ. ಪಿ. ನಾಯಕ.**
ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು.

***Abstract:***
*ಇಂದು ವಿಶ್ವಸಾಹಿತ್ಯವೆಂದರೆ ವಚನಸಾಹಿತ್ಯ. ಅದೊಂದು ಸಾಹಿತ್ಯ ಮಾತ್ರವಲ್ಲ, ಚಳುವಳಿಯಾಗಿಯೂ, ಇತರ ಅನೇಕ ಚಳುವಳಿಗಳಿಗೂ ಸ್ಫೂರ್ತಿಯಾಗಿದೆ. ಇಂತಹ ಅಲಭ್ಯವಾಗಿದ್ದ ವಚನಸಾಹಿತ್ಯವನ್ನು ವಿಶ್ವಮಟ್ಟದಲ್ಲಿ ಪ್ರಜ್ವಲಿಸಲು ಮೂಲ ಕಾರಣೀಕರ್ತರೆಂದರೆ ವಚನ ಪಿತಾಮಹರೆಂದೆ ಖ್ಯಾತರಾದ ಶ್ರೀ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರು. ಇಂಥವರ ಸಾಧನೆಯ ನೋಟವೆ ಈ ಲೇಖನದ ಉದ್ದೇಶವಾಗಿದೆ.*

***Keywords:*** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ವಚನ ಗುಮ್ಮಟ, ಡಾ.ಫ.ಗು.ಹಳಕಟ್ಟಿ*

## ಪೀಠಿಕೆ

ಡಾ.ಫ.ಗು.ಹಳಕಟ್ಟಿ ಅವರು 1880 ಜುಲೈ 2ನೇ ತಾರೀಖು ಧಾರವಾಡದಲ್ಲಿ ಜನಿಸಿದರು. ಗುರುಬಸಪ್ಪ ಇವರ ತಂದೆ, ಬೆಳಗಾವಿ ಜಿಲ್ಲೆಯ ಹೂಲಿ ಗ್ರಾಮದ ಸೊಪಡಲ ಮನೆತನದ ದಾನಮ್ಮದೇವಿ ಅಥವಾ ದಾನಾದೇವಿ ಇವರ ತಾಯಿ. ಗುರುಬಸಪ್ಪ ಅವರ ವಂಶಜರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹಳಕಟ್ಟಿಯಿಂದ ಬಂದವರು. ಹಾಗಾಗಿ ಅವರ ಮನೆತನದ ಹೆಸರು ಹಳಕಟ್ಟಿ ಆಗಿದೆ. ಗುರುಬಸಪ್ಪನವರು ವೃತ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರಾಗಿಯೂ, ಪ್ರವೃತ್ತಿಯಿಂದ ಸಾಹಿತಿಗಳೂ, ವಿದ್ವಾಂಸರೂ ಆಗಿದ್ದರು. ಕನ್ನಡದಲ್ಲಿ ಇಂಗ್ಲೆಂಡ್ ದೇಶದ ಇತಿಹಾಸವನ್ನು ಅರುಹಲು ಇಂಗ್ಲೆಂಡಿನ ಇತಿಹಾಸ ಎಂಬ ಕೃತಿಯನ್ನು, ಏಕನಾಥ ಸಾಧುಗಳ ಚರಿತ್ರೆ, ಫ್ರಾನ್ಸ್ ದೇಶದ ರಾಜ್ಯಕ್ರಾಂತಿ, ಸಿಕಂದರ ಬಾದಶಹನ ಚರಿತ್ರೆ ಎಂಬ ಮಹತ್ವದ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ತಂದೆಯಿಂದ ಬಳುವಳಿಯಾಗಿ ಬಂದ ಸಾಹಿತ್ಯಿಕ ಗುಣ ಮಗನಾದ ಫಕೀರಪ್ಪ ಹಳಕಟ್ಟಿಯವರಲ್ಲಿ ಮುಂದುವರಿಯುತ್ತದೆ. ಕಡುಬಡತನ ಮತ್ತು ಮೂರು ವರ್ಷದ ಮಗು ಆಗಿರುವಾಗಲೇ ತಾಯಿಯನ್ನು ಕಳೆದುಕೊಂಡು, ಅಜ್ಜಿ ಬಸಮ್ಮನ ಮಮತೆಯ ಆಶ್ರಯದಲ್ಲಿ ಬೆಳೆದರು. ಮಲತಾಯಿಯಿಂದ ಕಹಿ ಅನುಭವವಾದರೂ ಧೃತಿಗೆಡದೆ ಮನಸ್ಸನ್ನು ಅಧ್ಯಯನದ ಕಡೆ ಕೇಂದ್ರೀಕರಿಸಿದರು.

ಹಳಕಟ್ಟಿ ಅವರು 1896ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಹದಿನಾರನೇ ವಯಸ್ಸಿನಲ್ಲಿ ತಮ್ಮ ಸೋದರ ಮಾವನಾದ ತಮ್ಮಣ್ಣಪ್ಪ ಚಿಕ್ಕೋಡಿ ಅವರ ಮಗಳಾದ ಭಾಗೀರಥಿಯನ್ನು ಮದುವೆಯಾದರು. ಮುಂದೆ ಮುಂಬಯಿಯ ಸೇಂಟ್ ಝೇವ್ಹಿಯರ್ ಕಾಲೇಜಿನಲ್ಲಿ 1901ರಲ್ಲಿ ವಿಜ್ಞಾನ ಪದವಿ ಪೂರೈಸಿದರು. ಅಲ್ಲಿ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಅವರ ಸಹಪಾಠಿಗಳಾಗಿದ್ದರು. ನಂತರದಲ್ಲಿ 1904ರಲ್ಲಿ

***Please cite this article as:*** ಬಸವರಾಜ ಪಿ. ನಾಯಕ. (2023). ಕರ್ನಾಟಕದ ವಚನ ಗುಮ್ಮಟ ಮತ್ತು ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 26–31.

ಕಾನೂನು ಪದವೀಧರರಾಗಿ ಬೆಳಗಾವಿಯಲ್ಲಿ ವಕೀಲಿವೃತ್ತಿ ಪ್ರಾರಂಭಿಸಿ, 1923ರಲ್ಲಿ ಬೆಳಗಾವಿಯಿಂದ ವಿಜಯಪುರಕ್ಕೆ ವಾಸ್ತವ್ಯ ಬದಲಾಯಿಸುತ್ತಾರೆ. ಅಲ್ಲಿ ಸರಕಾರದಿಂದ ಕೆಲಕಾಲ ಸರಕಾರಿ ವಕೀಲರಾಗಿ ಮತ್ತು ಗವರ್ನಮೆಂಟ್ ಪ್ಲೀಡರರೆಂದು ಸೇವೆ ಸಲ್ಲಿಸಿದರೂ ಮನ ತೃಪ್ತಿಯಾಗಲಿಲ್ಲ. ಏನಿದ್ದರೂ ಅವರ ಸುಪ್ತಮನ ವ್ಯಷ್ಟಿ ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆ ಕಡೆ ಹೆಚ್ಚು ವಾಲಿತು. ಹಾಗಾಗಿಯೇ ಹಿರಿಯ ವಿದ್ವಾಂಸರಾದ ಜಿ.ಎಸ್. ಸಿದ್ಧಲಿಂಗಯ್ಯ ಅವರು **'ಜೇನು ನೊಣ ನನ್ನನ್ನು ಕಚ್ಚಿದರೂ ಚಿಂತೆಯಿಲ್ಲ,ನನ್ನ ಜನಕ್ಕೆ ಜೇನುತುಪ್ಪ ದೊರಕಿದರೆ ಸಾಕು'**[1] ಎಂಬಂತೆ ಬದುಕಿ ತೋರಿದ ಸಾಧಕರು ಎಂದು ಅವರ ವ್ಯಕ್ತಿತ್ವವನ್ನು ಹಾಡಿ ಹೊಗಳಿದ್ದಾರೆ.

ಫಕೀರಪ್ಪ ಅವರಿಗೆ ವಚನ ಸಾಹಿತ್ಯದ ಕಡೆ ಒಲವು ಮೂಡಲು ಕಾರಣಗಳು ಇಷ್ಟು– ತಾವು ಶಾಲಾ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಸಂದರ್ಭದಲ್ಲಿ ಕ್ರೈಸ್ತಮಿಷನರಿ ಶಾಲೆಗಳಲ್ಲಿ ಇದ್ದ ಬೈಬಲ್‌ನ ವಾತಾವರಣ. ಕ್ರೈಸ್ತಮಿಷನರಿ ಮತ್ತು ಮರಾಠಿಗರ ಅಬ್ಬರ. ಕನ್ನಡ ಭಾಷೆಯ ಪ್ರೀತಿ, ವಚನ ಸಾಹಿತ್ಯದ ಆಕರ್ಷಣೆಯು ಕರ್ನಾಟಕದ ಏಕೀಕರಣಕ್ಕಾಗಿ ದುಡಿಯಬೇಕೆಂಬ ಭಾವನೆ ಬಲಗೊಂಡಿತು. ವಿದ್ಯಾರ್ಥಿಯಾಗಿದ್ದಾಗಲೇ ಲೇಖನಗಳನ್ನು ಬರೆಯುತ್ತಿದ್ದ ಕಾರಣ, ಕನ್ನಡ ಸಾಹಿತ್ಯದ ಅಧ್ಯಯನದ ಹುಚ್ಚು ಹತ್ತಿತು. ಫಕೀರಪ್ಪ ಅವರು ಒಮ್ಮೆ ವಿಜಯಪುರದ ಶಿವಲಿಂಗಪ್ಪ ಮಂಚಾಲಿಯವರ ಮನೆಗೆ ತೆರಳಿ, ಅಲ್ಲಿ ಕಂಡ ಪ್ರಭುದೇವರ ವಚನ, ಷಟ್ಸ್ಥಲ ತಿಲಕದ ತಾಡೋಲೆಗಳನ್ನು ಕಂಡು ಮನವು ಕಲಕಿ ಜಾಗೃತಗೊಳ್ಳುತ್ತದೆ. ನಮ್ಮ ನಿರ್ಲಕ್ಷ್ಯದಿಂದಲೆ ಇಂತಹ ತಾಡೋಲೆಗಳು ಗೆದ್ದಲು ಹುಳುಗಳಿಗಳಿಗೆ ಆಹಾರವಾಗುತ್ತಿವೆ ಎಂದು ಭಾವಿಸಿ ವಚನ ಸಾಹಿತ್ಯದ ಸಂರಕ್ಷಣೆಗೆ ಮತ್ತು ಪ್ರಸಾರ ಕಾರ್ಯಕ್ಕಾಗಿ ಧುಮುಕುತ್ತಾರೆ.

ಅಂದಿನಿಂದಲೆ ವಿಜಯಪುರ ಜಿಲ್ಲೆಯಾದ್ಯಂತ ಪ್ರತಿಯೊಂದು ಮನೆ, ಮಠ ಜಗುಲಿಗಳಲ್ಲಿ ಪೂಜಿಸುತ್ತಿದ್ದ, ಇಲ್ಲವೆ ಒಲೆಗೆ ಉರುವಲಾಗಿ ಬಳಕೆಯಾಗುತ್ತಿದ್ದ ಮೂಲ ಹಸ್ತಪ್ರತಿ ಅಥವಾ ತಾಡೋಲೆಗಳನ್ನು ಹುಡುಕಿ ಸಂಗ್ರಹಿಸುತ್ತಾರೆ. 1920ನೇ ವರ್ಷದಲ್ಲಿ ಸಾವಿರಾರು ಸಂಖ್ಯೆಯಲ್ಲಿ ತಾಡೋಲೆಗಳ, ಹಸ್ತಪ್ರತಿಗಳನ್ನು ಶೇಖರಿಸುತ್ತಾರೆ. ಇವರಿಗಿಂತ ಮುಂಚೆ ಕವಿಚರಿತೆಕಾರರು ಐವತ್ತು ವಚನಕಾರರನ್ನು ಬೆಳಕಿಗೆ ತಂದಿದ್ದರಾದರೂ, ಫಕೀರಪ್ಪ ಅವರ ಶ್ರಮದಿಂದ 250ಕ್ಕೂ ಮಿಗಿಲಾಗಿ ವಚನಕಾರರನ್ನು ಬೆಳಕಿಗೆ ತರುತ್ತಾರೆ. ಅಲ್ಲದೆ ಅವುಗಳ ಅರ್ಥ ಬಿಡಿಸಿ, ರಾಶಿರಾಶಿ ವಚನಗಳನ್ನು ಸಂಗ್ರಹಿಸಿ ಮುದ್ರಿಸಿ ಜನರಿಗೆ ತಲುಪಿಸುವ ಕಾರಣಕ್ಕಾಗಿಯೇ ಸ್ವಂತ ಮನೆಯನ್ನೆ ಮಾರಾಟ ಮಾಡಿ 1925ರಲ್ಲಿ ಹಿತಚಿಂತಕ ಮುದ್ರಣಾಲಯವನ್ನು ಆರಂಭಿಸಿದ್ದು ಅವರ ಬದುಕಿನ ದೊಡ್ಡ ಮೈಲುಗಲ್ಲು. ಸ್ವತಃ ಮುದ್ರಣಾಲಯ ಆರಂಭಿಸಲು ಕಾರಣವೆಂದರೆ, ವಚನಶಾಸ್ತ್ರಸಾರ ಗ್ರಂಥವನ್ನು ಪ್ರಕಟಿಸಲು 500 ರೂಪಾಯಿ ಮುಂಗಡದೊಂದಿಗೆ ಮಂಗಳೂರಿನ ಬಾಸೆಲ್ ಮಿಷನ್‌ಗೆ ಕಳುಹಿಸುತ್ತಾರೆ. ಆದರೆ ಅವರು ಪರಧರ್ಮದ ಗ್ರಂಥಗಳನ್ನು ಮುದ್ರಿಸಿದರೆ, ತಮ್ಮ ಉದ್ದೇಶಕ್ಕೆ ಭಂಗವಾಗುತ್ತದೆಂದು ವಾಪಸ್ಸು ಕಳುಹಿಸುತ್ತಾರೆ. ತದನಂತರ ಆ ಗ್ರಂಥವನ್ನು ಶ್ರೀಯುತ ಚೌಗಲೆ ಅವರ ಮೂಲಕ ಮಹಾವೀರ ಪ್ರೆಸ್ಸಿಗೆ ಕಳುಹಿಸಿ ಮುದ್ರಿಸುತ್ತಾರೆ.

ಶರಣರ ಜೀವನ ಕುರಿತು ಚಿತ್ರಿಸಲು ಪತ್ರಿಕೆ ಅಗತ್ಯವೆನಿಸಿ ಶಿವಾನುಭವ ಪತ್ರಿಕೆಯನ್ನು 1–6–1926 ರಲ್ಲಿ ಪ್ರಾರಂಭಿಸಿ ಅನೇಕ ವಚನಕಾರರ ವಚನಗಳನ್ನು ಪ್ರಕಟಿಸುತ್ತಾರೆ. ಬಸವಾದಿ ಪ್ರಮಥರು ಕಲ್ಯಾಣದಲ್ಲಿ ಸ್ಥಾಪಿಸಿದ ಶಿವಾನುಭವ ಮಂಟಪದ ನೆರಳಿನಲ್ಲಿಯೇ ಪತ್ರಿಕೆ ಇರಬೇಕೆಂಬ ಕಾರಣದಿಂದ ಶಿವಾನಭವ ಎಂಬ ಶೀರ್ಷಿಕೆ ನೀಡಿದ್ದೇನೆ ಎಂದು ಫ.ಗು.ಹಳಕಟ್ಟಿ ಅವರೆ ಹೇಳಿಕೊಂಡಿದ್ದಾರೆ.ಇದು ಅವರ ಶರಣತತ್ವ ಪಾಲನೆಯ ದ್ಯೋತಕವಾಗಿದೆ.

ಅಲ್ಲದೆ ಬಸವಣ್ಣ ಮತ್ತು ಅಕ್ಕಮಹಾದೇವಿಯ ವಚನಗಳನ್ನು ಪ್ರತ್ಯೇಕ ಗ್ರಂಥವಾಗಿ ಪ್ರಕಟಿಸುತ್ತಾರೆ. ಆದರೆ ಜನರು ಅಷ್ಟಾಗಿ ಗಮನ ಕೊಡದಿದ್ದರೂ ಹಳಕಟ್ಟಿ ಅವರ ಧೈರ್ಯ ಕುಂದುವದಿಲ್ಲ.

ಮುಂದುವರಿದು ಗಣದಾಸಿ ವೀರಣ್ಣ, ಸಂಗನ ಬಸವೇಶ್ವರ, ದೇವರದಾಸಿಮಯ್ಯ, ಹಡಪದಪ್ಪಣ್ಣ, ಸಕಲೇಶ ಮಾದರಸ, ಆದಯ್ಯ, ಚನ್ನಬಸವೇಶ್ವರ, ಅಂಬಿಗರ ಚೌಡಯ್ಯ, ರೆಮ್ಮವ್ವೆ, ಏಲೇಶ ಕೇತಯ್ಯ, ಅರಿವಿನ ಮಾರಿತಂದೆ ವಚನಗಳನ್ನು ಕನ್ನಡಿಗರ ಮನ ಮುಟ್ಟಿಸುತ್ತಾರೆ. ವಚನಸಾರ. ಹರಿಹರನ 42 ರಗಳೆಗಳನ್ನು ಪ್ರಕಟಿಸುತ್ತಾರೆ. ದೇವರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ ಅವರ ವಚನಗಳಿಗೂ ಸಮಗ್ರ ಅರ್ಥ ಬರೆದು ಪ್ರಕಟಿಸಿದ್ದಾರೆ. ಪರಮಾತ್ಮನ ವಚನಗಳು, ಭಕ್ತಿಯ ವಚನಗಳು, ದೇವರದಾಸಿಮಯ್ಯನ ವಚನಗಳು, ಬಸವೇಶ್ವರನ ತತ್ವಗಳು ಮತ್ತು ಶಿವಾನಭವ ಸತ್ಯಮಾರ್ಗ (ಶಿವಾನುಭವ ಪತ್ರಿಕೆಗಳಿಗೆ ವಿವಿಧ ವಿದ್ವಾಂಸರು ಬರೆದ ಲೇಖನಗಳು) ಸಂಗ್ರಹ ಪ್ರಕಟಿಸಿದ್ದಾರೆ. ಘನಮಠದಾರ್ಯರಿಂದ ರಚಿತವಾದ ಕೃಷಿಜ್ಞಾನ ಪ್ರದೀಪಿಕೆ ಗ್ರಂಥ, ನೈತಿಕ ಮತ್ತು ಭಕ್ತಿಯ ವಚನಗಳನ್ನು ಪ್ರಚುರಪಡಿಸಿದ್ದಾರೆ. ಕರ್ನಾಟಕ ಭಾಷೆಗೋಸ್ಕರ ಜನತೆಯಲ್ಲಿ ಆಸಕ್ತಿಯನ್ನು ಹುಟ್ಟಿಸಿದವರಲ್ಲಿ ಮೊದಲಿಗರಾದ ಚನ್ನಬಸಪ್ಪ ಧಾರವಾಡ ಎಜುಕೇಷನ್ ಇನ್‌ಸ್ಪೆಕ್ಟರ್ ಇವರ ಚರಿತ್ರೆಯನ್ನುಸಿದ್ಧಪಡಿಸಿದ್ದಾರೆ.ಪುರಾತನ ವಚನಕಾರರ ವಚನಗಳನ್ನು ಒಳಗೊಂಡ ಲಿಂಗಪೂಜೆಯ ತತ್ವಗಳು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಶಿವಾನಭವ ಪತ್ರಿಕೆಯು ಪ್ರಾರಂಭದಲ್ಲಿ ತ್ರೈಮಾಸಿಕ, ದ್ವೈಮಾಸಿಕ, ನಂತರ ಮಾಸಪತ್ರಿಕೆಯಾಗಿ ಪ್ರಕಟಗೊಂಡು ಅರ್ಜುನವಾಡ,ಅಬ್ಬಲೂರು, ಅರಕೇರಿ ಶಾಸನಗಳನ್ನು, ಹರಿಹರನ ರಗಳೆಗಳನ್ನು ಪ್ರಕಟಿಸಿದರು.

ಹಳಕಟ್ಟಿ ಅವರು ವಚನಶಾಸ್ತ್ರಸಾರವನ್ನು 1923, 1931, 1939ರಲ್ಲಿ ಮೂರು ಭಾಗಗಳಾಗಿ ಪ್ರಕಟಿಸಿದರು. ವಚನಶಾಸ್ತ್ರಸಾರ ಗ್ರಂಥವು ಹೊರಬಂದ ನಂತರ ಅನೇಕ ಮಹನೀಯರು ಹಾಡಿ ಹೊಗಳಿರುವ ಬಗ್ಗೆ ಸ್ವತಃ ಫ.ಗು. ಹಳಕಟ್ಟಿ ಅವರು ತಮ್ಮ ಶಿವಾನುಭವ ಪತ್ರಿಕೆಯಲ್ಲಿ ವರದಿ ಅಥವಾ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಿದ್ದಾರೆ. "ಅದರಲ್ಲೂ ಕೈ.ವಾ.ಕೆ.ಪಿ ಪಟ್ಟಣಶೆಟ್ಟರು ಕೆಲವೊಬ್ಬ ತಮಿಳು ದೇಶದ ಪಂಡಿತರು ಈ ಗ್ರಂಥವನ್ನು ನೋಡಿದ ಬಳಿಕ ತಮಿಳು ವಾಙ್ಮಯದಲ್ಲಿ ಐದನೆಯ ವೇದವೆಂದು ಕರೆಯಲ್ಪಡುವ ಸರ್ವಮಾನ್ಯವಾದ ಗ್ರಂಥ ಒಂದಿದ್ದು ವಚನಶಾಸ್ತ್ರ ಸಾರವು ಅದಕ್ಕೂ ಹೆಚ್ಚಿನ ತರಗತಿಯದೆಂದು ಅಭಿಪ್ರಾಯಪಟ್ಟಿದ್ದನ್ನು ನನಗೆ ತಿಳಿಸಿದರು."[2] ಶಿವಶರಣರ ಮತ್ತು ಶಿವಶರಣೆಯರ ಚರಿತ್ರೆಗಳನ್ನು, ಲಿಂಗಾಯತ ಧರ್ಮದ ತತ್ವಾಚರಣೆಗಳನ್ನು ಸ್ಪಷ್ಟಪಡಿಸಿದ್ದಾರೆ. ಅಮರಗಣಾದೀಶ್ವರರ ಚರಿತ್ರೆಗಳನ್ನು ಒಳಗೊಂಡ ಮಹತ್ವದ ಕೃತಿ ಶಿವಾನುಭವ ಶಬ್ದಕೋಶ.

ಹಳಕಟ್ಟಿ ಅವರು ಅತ್ಯುತ್ತಮ ಸಂಘಟಕರಾಗಿ, ಸಮಾಜ ಸೇವಕರಾಗಿಯೂ, ಶಿಕ್ಷಣಪ್ರೇಮಿಗಳಾಗಿಯೂ ಕನ್ನಡ ನಾಡಿನಾದ್ಯಂತ ಚಿರಪರಿಚಿತರಾದವರು. ಆ ಕಾರಣಕ್ಕಾಗಿಯೇ ಹಿಂದುಳಿದ ವಿಜಯಪುರ ಜಿಲ್ಲೆಯಲ್ಲಿ 1910ರಲ್ಲಿ ಬಿ.ಎಲ್.ಡಿ.ಇ ಶಿಕ್ಷಣಸಂಸ್ಥೆ ಸ್ಥಾಪಿಸಿ ಅಕ್ಷರ ಪ್ರಪಂಚದಲ್ಲಿ ಕ್ರಾಂತಿ ಎಬ್ಬಿಸಿದರು. ಪ್ರಾಥಮಿಕ ಶಿಕ್ಷಣಕ್ಕಾಗಿ ಹಳಕಟ್ಟಿಯವರು ಅವಿರತವಾಗಿ ಶ್ರಮಿಸಿದ್ದಾರೆ. ಹಾಗಾಗಿ ಅವರೇ 'ಯಾವುದೇ ರಾಷ್ಟ್ರೀಯ ಕೆಲಸವನ್ನು ಪ್ರಾರಂಭಿಸಬೇಕಾದರೆ, ಅದು ಪ್ರಾಥಮಿಕ ಶಾಲೆಗಳಿಂದಲೇ ಪ್ರಾರಂಭಿಸಬೇಕೆಂದು ನನ್ನ ಅಭಿಪ್ರಾಯವಾಗಿದೆಯೆಂದು'[3] ಆಕಾಶವಾಣಿ ಭಾಷಣದಲ್ಲಿ ಹೇಳಿದ್ದಾರೆ.

ಕೆರೆಯ ನಿರ್ಮಾಣ, ಆರ್ಥಿಕವಾಗಿ ಹಿಂದುಳಿದ ನೇಕಾರರಿಗೆ ಸಹಕಾರ ಸಂಘದ ಸ್ಥಾಪನೆಯಂತಹ ಮಹತ್ವದ ಯೋಜನೆ ಕೈಗೊಂಡರು. 1917ರಲ್ಲಿ ವಿಜಯಪುರ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾ 1920ರಲ್ಲಿ ಮುಂಬಯಿಯ ರಾಜ್ಯ ವಿಧಾನ ಪರಿಷತ್ತಿನ

ಸದಸ್ಯರಾಗಿ ಆಯ್ಕೆಯಾದದ್ದು ಸಾಧನೆಯ ಮತ್ತೊಂದು ವಿಶಿಷ್ಟತೆ. ಆದರೆ ಮುಂದಿನ ಚುನಾವಣೆಯಲ್ಲಿ ನಿಲ್ಲಲಾರದೆ ವಚನ ಸಂಗ್ರಹಣೆ ಮತ್ತು ಪ್ರಸಾರಕ್ಕಾಗಿ ತಮ್ಮ ಸೇವೆ ಮುಡಿಪಾಗಿಟ್ಟರು. ಜೂನ್ 1928ರಲ್ಲಿ ಧಾರವಾಡದಲ್ಲಿ ಜರುಗಿದ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ ಏಕೀಕರಣ ಚಳುವಳಿಗೆ ಚಾಲನೆ ಒದಗಿಸಲು 'ನವಕರ್ನಾಟಕ'ಎಂಬ ವಾರಪತ್ರಿಕೆಯನ್ನು ಹೊರತರುವ ಮೂಲಕ ಹೋರಾಟಕ್ಕೆ ಅಣಿಯಾದರು. ಫಕೀರಪ್ಪ ಅವರು ಬಸವಣ್ಣನವರ ವಚನಗಳನ್ನು 1922ರಲ್ಲಿ ರವರೆಂಡ್ ಚೇ.ಎನ್. ಫಾರಕ್ವಹಾರ ಎಂಬ ಹೆಸರಿನ ಸಂಶೋಧಕರ ಸೂಚನೆಯ ಮೇರೆಗೆ ಇಂಗ್ಲಿಷ್ ಭಾಷೆಗೆ ಅನುವಾದಿಸಿ 'ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟಗೊಳಿಸುವದಲ್ಲದೆ,ವಚನ ಗಾಯನಕ್ಕಾಗಿ ಧ್ವನಿ ಮುದ್ರಣಕ್ಕಾಗಿ ಸಂಗೀತಗಾರರನ್ನು ಮುಂಬಯಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿದ್ದು ಅವಿಸ್ಮರಣೀಯ ಘಟನೆ. ಎಲ್ಲಿದ್ದರೂ ವಚನ ಪ್ರಸಾರ ಕಾರ್ಯವನ್ನೆ ಉಸಿರಾಗಿಸಿಕೊಂಡ ಪರಿಣಾಮವಾಗಿ ಅವರನ್ನು ಕರ್ನಾಟಕದ ವಚನ ಪಿತಾಮಹ ಎಂದು ಕರೆದಿರುವುದು ಯೋಗ್ಯವಾಗಿದೆ. ಇಷ್ಟಲ್ಲದೆ ಅವರಿಗೆ ರಾವ್ ಬಹದ್ದೂರ್ ಎಂಬ ಬಿರುದೂ ಕೂಡ ಇದೆ. 1912ರಲ್ಲಿ ವರ್ತಕರಿಗೆ ಮೂಲಧನದ ಸಮಸ್ಯೆಯಾಗಬಾರದೆಂದು 'ಶ್ರೀ ಸಿದ್ಧೇಶ್ವರ ಬ್ಯಾಂಕ್ ಆರಂಭಿಸಿ, ಅದರ ಅಧ್ಯಕ್ಷರಾಗಿ ಬೆಳವಣಿಗೆಗೆ ಕಾರಣರಾದರು.

ಹತ್ತಿ ಮಾರಾಟ ಸಂಘವನ್ನು ಸ್ಥಾಪಿಸಿದ್ದಲ್ಲದೆ, ಒಕ್ಕಲಿಗರ ಹಿತರಕ್ಷಣೆಗಾಗಿ ಒಕ್ಕಲುತನದ ಸಹಕಾರಿ ಸಂಘವನ್ನುಕಟ್ಟಿದರು. ಹಳ್ಳಿಗಳ ಅಭಿವೃದ್ಧಿಗಾಗಿ ಗ್ರಾಮೀಣ ಅಭಿವೃದ್ಧಿ ಸಂಘ ಸ್ಥಾಪಿಸುತ್ತಾರೆ. ಅಸ್ಪೃಶ್ಯತೆಯ ನಿವಾರಣೆಗಾಗಿ ವೀರಶೈವರು ಬೆಂಬಲ ಕೊಡಬೇಕೆಂದು 1932 ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನದಿಂದ ಕರೆಕೊಡುತ್ತಾರೆ. ಶರಣಸಾಹಿತ್ಯ ಪ್ರಕಟಣೆಗಾಗಿ ಅವರ ಜೊತೆ ಇದ್ದದ್ದು ಸೈಕಲ್.ಶಕ್ತಿ ಇರುವವರೆಗೆ ಕುಳಿತು ನಡೆಸಿದರು. ಕಾಲಕ್ರಮೇಣ ಶಕ್ತಿ ಕ್ಷೀಣಿಸುತ್ತಿರುವಾಗ ಚೀಲಗಳನ್ನು ಸೈಕಲ್ ಹ್ಯಾಂಡಲ್‌ಗೆ ಹಾಕಿ ನಡೆದುಕೊಂಡು ಅಲೆದಾಡಿದ ಧೀಮಂತ ಪುರುಷರು.ಅವರ ನಿರಂತರ ಸಾಹಿತ್ಯಕ ಸೇವೆಗಾಗಿ ನೆರವಾದವರಲ್ಲಿ ಮಾವನಾದ ತಮ್ಮಣ್ಣಪ್ಪ, ಬಬಲೇಶ್ವರದ ಶಾಂತ ವೀರಸ್ವಾಮಿಗಳು, ಹಾನಗಲ್ ಕುಮಾರಸ್ವಾಮಿಗಳು, ಹಾಲಭಾವಿ ವೀರಭದ್ರಪ್ಪ, ಹರ್ಡೆಕರ್ ಮಂಜಪ್ಪ, ಹಾಗೂ ಅವರ ಮುದ್ರಣಯಂತ್ರದ ಕೆಲಸಗಾರರನ್ನು ಸದಾ ನೆನಪಿಸಿಕೊಳ್ಳಬೇಕಾದ ಸಂದರ್ಭವಿದು. ಧಾರ್ಮಿಕ ಜಾಗೃತಿಗಾಗಿ ಶಿವಶರಣ ನೆನಪಿನಲ್ಲಿ ಶ್ರೀಸಿದ್ಧೇಶ್ವರ ಸಂಸ್ಥೆ ಹುಟ್ಟು ಹಾಕಿದರು. ವಿಜಯಪುರದಲ್ಲಿ ಬರಗಾಲ ನಿವಾರಣಾ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕೃಷಿ ಪರ್ಯಾಯ ಚಟುವಟಿಕೆಗಳನ್ನು ಚುರುಕುಗೊಳಿಸಿದರು.

**ಸ್ಥಿತಪ್ರಜ್ಞೆಯ ವ್ಯಕ್ತಿತ್ವ**

ಫಕೀರಪ್ಪ ಹಳಕಟ್ಟಿ ಮತ್ತು ಪತ್ನಿಭಾಗೀರತಿದೇವಿ ಅವರದು 58 ವರ್ಷಗಳ ದೀರ್ಘವಾದ ದಾಂಪತ್ಯ. ದಂಪತಿಗಳಿಗೆ ಚಂದ್ರಶೇಖರ,ಸರಸ್ವತಿ,ಗುರುಪುತ್ರ, ಪಾರ್ವತಿಬಾಯಿ ಹಾಗೂ ಶಿವಶಂಕರ ಅವರ ಮಕ್ಕಳು. ಉನ್ನತ ಹುದ್ದೆಯಲ್ಲಿದ್ದ ಚಂದ್ರಶೇಖರ ಮತ್ತು ಮಗಳಾದ ಸರಸ್ವತಿಯವರನ್ನು ಕಳೆದುಕೊಂಡಾಗಲೂ ಸಹಿಸಿಕೊಂಡು ಶರಣರಂತೆ ಮರಣವೇ ಮಹಾನವಮಿ ಎಂದು ಬದುಕಿ ತೋರಿದವರು. "ಆ ಸಮಯದಲ್ಲಿ ಧಾರವಾಡದ ಆರ್.ಸಿ.ಹಿರೇಮಠ ಅವರು ಹಳಕಟ್ಟಿ ಅವರನ್ನು ಮಾತನಾಡಿಸಲು ಬಂದಿದ್ದರು.' ಶಿವನ ಸೊಮ್ಮು ಶಿವನಿಗೆ ಸಂದಿತು"[4] ಎಂದು ದೇವರ ದಾಸಿಮಯ್ಯನ ಕಾಲ ವಿಚಾರದ ಕುರಿತು ಮಾತನಾಡಿಸಲು ಶುರು ಮಾಡಿದರಂತೆ, ಇದು ಅವರ ಸಾಹಿತ್ಯಿಕ ಶ್ರದ್ಧೆ ಮತ್ತು ಸಾಮಾಜಿ ಕಾಳಜಿಯ ದ್ಯೋತಕವಾಗಿದೆ. ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ವಿಜಾಪುರಕ್ಕೆ ಹೋದಾಗ, ಮನೆಗೆ ತೆರಳಿ ಹೂ, ಹಣ್ಣು ಕೊಟ್ಟು ನಮಸ್ಕಾರ ಮಾಡಿದಾಗ,

ರಾಜ್ಯಪಾಲರ ನಡೆಗೆ ಮತ್ತು ಹಳಕಟ್ಟಿಯವರ ವ್ಯಕ್ತಿತ್ವ ಅರಿಯದವರು ದಂಗುಬಡಿದರಂತೆ.

1956ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಸಂದರ್ಭದ ಸನ್ನಿವೇಶವು ಎಲ್ಲರ ಮನಕಲಕುವಂತೆ ಇದೆ. ಕುಲಪತಿಗಳಾದ ದಾನಪ್ಪ ಚಿಂತಪ್ಪ ಪಾವಟೆ ಅವರು ಘಟಿಕೋತ್ಸವ ಸಮಾರಂಭದ ನಂತರ ಏರ್ಪಡಿಸಿದ ಅತಿಥಿಗೃಹದ ಭೋಜನಕೂಟದಲ್ಲಿ ಭಾಗವಹಿಸಿದ ಹಳಕಟ್ಟಿ ಅವರು ಕೋಟು, ಪಂಚೆ, ಪೇಟ ಧರಿಸಿ ಬಂದಿರುತ್ತಾರೆ. ಊಟದ ಸಮಯದಲ್ಲಿ ಕುಲಪತಿಗಳು ಹಳಕಟ್ಟಿಯವರನ್ನು ಗಮನಿಸಿ, ಕುಲಸಚಿವರಾದ ಪ್ರೊ.ಎಸ್.ಎಸ್.ಒಡೆಯರ್ ಅವರನ್ನು ಕರೆದು ಹಳಕಟ್ಟಿಯವರಿಗೆ ಕೋಟು ಕಳಚಿ ಊಟ ಮಾಡಲು ಹೇಳಿಸುತ್ತಾರೆ. ಕುಲಸಚಿವರು ಹಳಕಟ್ಟಿಯವರಿಗೆ 'ಸಾಹೇಬ್ರ ಸೆಕೆ ಬಾಳ ಅದ, ಕೋಟು ಕಳಚಿ ಊಟ ಮಾಡ್ರಲಾ' ಎಂದು ಹೇಳುತ್ತಾರೆ. ಆಗ ಫಕೀರಪ್ಪ ಅವರು ಕುಲಸಚಿವರನ್ನು ಸನಿಹಕ್ಕೆ ಕರೆದು' ತಮ್ಮಾ ಕೋಟಿನ ಒಳಗಿರುವ ಅಂಗಿ ಬಾಳ ಹರಿದದ, ಅದಕ್ಕ ಕೋಟು ಹಾಕೊಂಡಿದ್ದೀನಿ, ನಾನು ಸೆಕೆ ತಡಕೊತೀನಿ'ಎನ್ನುತ್ತಾರೆ. ಮುಂದುವರಿದು ಒಡೆಯರೇ "ನಿಮ್ಮ ಚಿಕ್ಕಪ್ಪನವರು ಅಂಬಿಗರ ಚೌಡಯ್ಯನವರ ಕುರಿತ ವಿಷಯ ಮತ್ತು ವಚನಗಳನ್ನು ಸಂಗ್ರಹಿಸಿದ್ದರು, ಅದರ ಬಗ್ಗೆ ಏನಾಯಿತು, ನನಗೆ ಪ್ರಕಟಿಸಬೇಕೆಂಬ ಇಚ್ಛೆ ಇದೆ"[5] ಎಂದು ಹೇಳುವ ರೀತಿಯೂ ಬದುಕಿನ ಪರಿಯನ್ನು ಹೇಳುತ್ತದೆ. ಹಳಕಟ್ಟಿ ಅವರ ಸರಳತೆಗೆ ಮತ್ತು ಬಡತನಕ್ಕೆ ಮತ್ತೊಂದು ಘಟನೆ ಸಾಕ್ಷಿಯಾಗಿದೆ. ಒಮ್ಮೆ ಯಾರೋ ಗೆಳೆಯರು ತಮ್ಮ ಮಗನಿಗೆ ಹೆಣ್ಣು ನೋಡಲು, ಅವರನ್ನು ಬೇರೊಂದು ಊರಿಗೆ ಕರೆದುಕೊಂಡು ಹೋಗಲು ಬಂದಿರುತ್ತಾರೆ. ಇವರು ಇರುವ ಒಂದು ಅಂಗಿಯನ್ನು ತೊಳೆದು ಒಣ ಹಾಕಿ ಬರಿಮೈಯಲ್ಲೇ ಕುಳಿತಿದ್ದರಂತೆ, ಬಂದ ಗೆಳೆಯರೇ ಅವರಿಗೆ ಬೇರೊಂದು ಅಂಗಿಯನ್ನು ಕೊಡಿಸಿ ಕರೆದುಕೊಂಡು ಹೋದರಂತೆ.

ಅಲ್ಲದೆ ಹೊಟ್ಟೆಯ ಶಸ್ತ್ರ ಚಿಕಿತ್ಸೆಯಾದಾಗಲೂ, ರೈಲು ಪ್ರಯಾಣದಲ್ಲಿ ಕಾಲು ಮುರಿದಾಗಲೂ ವಚನ ಸಾಹಿತ್ಯದ ಪ್ರಕಟಣೆಯ ಕಾರ್ಯ ನಿಲ್ಲಿಸುವದಿಲ್ಲ, ಬಡತನದಲ್ಲಿಯೇ ಬದುಕಿ, ಮುರುಕು ಸೈಕಲ್‌ನಲ್ಲಿ ಅಲೆಯುತ್ತಾ ಬರಿಗೈಯಲ್ಲಿ29–06– 1964ರಲ್ಲಿ 84ನೇ ವರ್ಷದಲ್ಲಿ ಲಿಂಗೈಕ್ಯರಾಗುತ್ತಾರೆ. ಹಳಕಟ್ಟಿಯವರು 1931ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದರು. 1933ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದರು. 1926ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಗೌರವಿಸಿದೆ. ಭಾರತ ಸರಕಾರವು ಇವರ ಸಾಹಿತ್ಯಿಕ ಮತ್ತು ಸಾಮಾಜಿಕ ಸೇವೆಯನ್ನು ಗಮನಿಸಿ ರಾವ್ ಸಾಹೇಬ್ ಮತ್ತು ರಾವ್ ಬಹದ್ದೂರ್ ಬಿರುದು ನೀಡಿ ಗೌರವಿಸಿದೆ.

ಕರ್ನಾಟಕದ ಆಚಾರ್ಯ ಪುರುಷ, ನವೋದಯದ ಕಾರ್ಯ ಪ್ರವರ್ತಕ, ಕನ್ನಡದ ಕಣ್ವಋಷಿ ಬಿ.ಎಂ.ಶ್ರೀ ಅವರು ನಾಡಹಬ್ಬದ ನಿಮಿತ್ತ ಒಮ್ಮೆ ಅತಿಥಿಯಾಗಿ ವಿಜಯಪುರಕ್ಕೆ ಬಂದಿದ್ದರು. ಕಾರ್ಯಕ್ರಮದ ತರುವಾಯ ಸಂಘಟಕರು ಜಗದ್ವಿಖ್ಯಾತ ಗೋಳಗುಮ್ಮಟ ನೋಡಲು ಬಯಸುವಿರಾದರೆ, ನಾಳೆಯೇ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡುತ್ತೇವೆ ಎನ್ನುತ್ತಾರೆ. ಆಗ ಬಿ.ಎಂ.ಶ್ರೀ ಅವರು ಗೋಳಗುಮ್ಮಟಕ್ಕಿಂತ ವಚನಗುಮ್ಮಟ, ಜ್ಞಾನ ಗುಮ್ಮಟ ನೋಡಲು ಬಯಸಿದ್ದೇನೆ ಎನ್ನುತ್ತಾರೆ. ಈ ವಚನಗುಮ್ಮಟ ಬೇರ್‍ಯಾರೂ ಆಗಿರದೆ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯೇ ಆಗಿರುವುದನ್ನು ಕನ್ನಡನಾಡು ಮರೆಯಲಾರದಷ್ಟು ವಚನಸಂಗ್ರಹಕ್ಕೆ ಅಮೋಘ ಸೇವೆ ಸಲ್ಲಿಸಿದ್ದಾರೆ. ಅವರ ಜನ್ಮದಿನವಾದ ಜುಲೈ 2ನೇ ದಿನವನ್ನು ಕರ್ನಾಟಕ ಸರಕಾರವು 'ವಚನಸಾಹಿತ್ಯ ಸಂರಕ್ಷಣಾ ದಿನ'ವನ್ನಾಗಿ ಘೋಷಿಸುವ ಮೂಲಕ ಅವರಿಗೆ ಗೌರವ ಸಮರ್ಪಣೆ ಮಾಡಿದೆ.

**ಕೊನೆಟಿಪ್ಪಣಿಗಳು**

- ಸಿದ್ದಲಿಂಗಯ್ಯ ಜಿ.ಎಸ್ & ಕೃಷ್ಣಯ್ಯ ಎಂ.ಎಚ್. (2016). *ಸಾಲು ದೀಪಗಳು.* ಕರ್ನಾಟಕ ಸಾಹಿತ್ಯ ಅಕಾಡೆಮಿ ಪು.ಸಂ. 54.
- ಶಾಂತರಸ. (ಸಂ.). (1983). *ಹಳಕಟ್ಟಿ ನುಡಿಪುರುಷ.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಪು.ಸಂ.37,38
- ಅದೇ. ಪು.ಸಂ.5
- ಅದೇ. ಪು.ಸಂ.8
- ಅದೇ. ಪು.ಸಂ.9